All India Radio: Bangalore
National Bulletin In Kannada
14.10.2026 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
14.10.2026 19.35 hrs
<><><><>

ಮುಖ್ಯಾಂಶಗಳು

- ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ೫೩ ಸಾವಿರದ ೪೨೮ ಕೋಟಿ ರೂಪಾಯಿಗಳ ಅನುದಾನಕ್ಕೆ ಕೇಂದ್ರ ಸಚಿವ ಸಂಪುಟ ಅನುಮೋದನೆ
- ಲಡಾಖ್‌ನಲ್ಲಿ ೩ ಸಾವಿರದ ೩೫೦ ಕೋಟಿ ರೂಪಾಯಿ ಮೌಲ್ಯದ ಅಭಿವೃದ್ಧಿ ಯೋಜನೆಗಳಿಗೆ ವರ್ಚುಯಲ್ ಮೂಲಕ ನಾಳೆ ಪ್ರಧಾನಿ ನರೇಂದ್ರ ಮೋದಿ ಚಾಲನೆ
- ಕೆನಡಾ ವಿದೇಶಾಂಗ ಸಚಿವರೊಂದಿಗೆ ಕೇಂದ್ರ ಸಚಿವ ಡಾ. ಎಸ್.ಜೈಶಂಕರ್ ಮಾತುಕತೆ
- ಟಿ-೨೦ ಕ್ರಿಕೆಟ್: ಸರಣಿಯ ೪ನೇ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಟಾಸ್ ಗೆದ್ದ ಭಾರತ ಫಿಲ್ಡೀಂಗ್ ಆಯ್ಕೆ
- ವಿಶ್ವ ಸ್ಕೇಟಿಂಗ್ ಗೇಮ್ಸ್: ಪುರುಷರ ಒಂದು ಸಾವಿರ ಮೀಟರ್ ಸ್ಪ್ರಿಂಟ್ ವಿಭಾಗದಲ್ಲಿ ಭಾರತದ ಆನಂದ ಕುಮಾರ್‌ಗೆ ಬೆಳ್ಳಿ

<><><><>

ಕೇಂದ್ರ ಸಚಿವ ಸಂಪುಟ ಇಂದು 'ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ'ವನ್ನು ೨೦೨೬-೨೭ ರಿಂದ ೨೦೩೦-೩೧ ರವರೆಗಿನ ಐದು ವರ್ಷಗಳ ಅವಧಿಗೆ ಮುಂದುವರಿಸಲು ಅನುಮೋದನೆ ನೀಡಿದೆ. ಸಂಪುಟ ಸಭೆಯ ನಂತರ ಮಾಧ್ಯಮಗಳಿಗೆ ಮಾಹಿತಿ ನೀಡಿದ ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ೫೩ ಸಾವಿರದ ೪೨೮ ಕೋಟಿ ರೂಪಾಯಿಗಳ ವೆಚ್ಚಕ್ಕೆ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು. ದಿವ್ಯಾಂಗರ ಪಿಂಚಣಿ ಯೋಜನೆಯಡಿ, ಇನ್ನು ಮುಂದೆ ೭೯ ವರ್ಷದೊಳಗಿನವರಿಗೆ ೩೭೫ ರೂಪಾಯಿ ಮತ್ತು ೮೦ ವರ್ಷ ಹಾಗೂ ಅದಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ೬೨೫ ರೂಪಾಯಿಗಳಷ್ಟು ನೆರವು ನೀಡಲಾಗುವುದು ಎಂದು ಅವರು ಮಾಹಿತಿ ನೀಡಿದರು.

'ಪ್ರಧಾನ ಮಂತ್ರಿ ಸಾಮಾಜಿಕ ಸಹಾಯತಾ ಯೋಜನೆ'ಯಡಿ, ದಿವ್ಯಾಂಗರಿಗೆ ಅನ್ವಯವಾಗುವ ಅಂಗವೈಕಲ್ಯದ ಮಾನದಂಡವನ್ನು ಪ್ರಸ್ತುತ ಇರುವ ಶೇಕಡಾ ೮೦ ರಿಂದ ಶೇಕಡಾ ೪೦ ಕ್ಕೆ ಇಳಿಸಲಾಗಿದೆ. ದೇಶದ ಎಲ್ಲಾ ೩೬ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಒಟ್ಟು ೩ ಕೋಟಿ ೧೦ ಲಕ್ಷ ಫಲಾನುಭವಿಗಳಿಗೆ ಈ ಅನುಮೋದನೆಯಿಂದ ಪ್ರಯೋಜನವಾಗಲಿದೆ ಎಂದು ಅವರು ತಿಳಿಸಿದರು. ವೃದ್ಧರು ಮತ್ತು ವಿಧವೆಯರಿಗೆ ಇರುವ ಪಿಂಚಣಿ ಯೋಜನೆಗಳು ಹಾಗೂ ಕುಟುಂಬ ಪ್ರಯೋಜನ ಯೋಜನೆಯು ತಮ್ಮ ಪ್ರಸ್ತುತ ಸ್ವರೂಪದಲ್ಲಿಯೇ ಮುಂದುವರಿಯಲಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ಇದೇ ವೇಳೆ ಕೇಂದ್ರ ಸಚಿವ ಸಂಪುಟವು ಐಡಿಬಿಐ ಬ್ಯಾಂಕ್‌ನ 'ವ್ಯೂಹಾತ್ಮಕ ಪುನರ್ರಚನೆ'ಗೆ ಅನುಮೋದನೆ ನೀಡಿದೆ. ಎಂಎಸ್‌ಎಂಇ ಮತ್ತು ಹೊಸ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಈ ಬ್ಯಾಂಕ್ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅವರು ಮಾಹಿತಿ ನೀಡಿದರು. ಬ್ಯಾಂಕ್‌ಗಾಗಿ ವ್ಯೂಹಾತ್ಮಕ ಪಾಲುದಾರರನ್ನು ಆಯ್ಕೆ ಮಾಡಲಾಗಿದ್ದು, ಇದರ ಮೂಲಕ ಬಂಡವಾಳವನ್ನು ಹೂಡಿಕೆ ಮಾಡಲಾಗುವುದು. ಪುನರ್ರಚನೆಗೊಂಡ ಸಂಸ್ಥೆಯಲ್ಲಿ ಭಾರತ ಸರ್ಕಾರ ಮತ್ತು ಎಲ್‌ಐಸಿ ಶೇಕಡಾ ೩೪ ರಷ್ಟು ಪಾಲನ್ನು ಉಳಿಸಿಕೊಳ್ಳಲಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದರು.

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಲಡಾಖ್‌ನಲ್ಲಿ ಸುಮಾರು ೩ ಸಾವಿರದ ೩೫೦ ಕೋಟಿ ರೂಪಾಯಿ ಮೌಲ್ಯದ ಐದು ಪ್ರಮುಖ ಅಭಿವೃದ್ಧಿ ಯೋಜನೆಗಳನ್ನು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಈ ಯೋಜನೆಗಳು ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸುವುದು, ಇಂಧನ ಮೂಲಸೌಕರ್ಯ ಸುಧಾರಿಸುವುದು, ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವುದು ಮತ್ತು ಈ ಪ್ರದೇಶದಲ್ಲಿ ನೀರಿನ ಭದ್ರತೆ ಹೆಚ್ಚಿಸುವ ಗುರಿ ಹೊಂದಿವೆ. ಲೇಹ್‌ನ ಕುಶೋಕ್ ಬಕುಲಾ ರಿಂಪೋಚೆ ವಿಮಾನ ನಿಲ್ದಾಣದಲ್ಲಿ ೬೪೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಹೊಸ ಪ್ರಯಾಣಿಕರ ಟರ್ಮಿನಲ್ ಕಟ್ಟಡವನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ. ಈ ಆಧುನಿಕ ಟರ್ಮಿನಲ್ ೧೩ ಸಾವಿರದ ೮೦೦ ಚದರ ಮೀಟರ್‌ಗಳಷ್ಟು ವಿಸ್ತಾರವಾಗಿದ್ದು, ವಾರ್ಷಿಕವಾಗಿ ೩೫ ಲಕ್ಷ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯವನ್ನು ಹೊಂದಿದೆ.

ಗಡಿ ರಸ್ತೆಗಳ ಸಂಸ್ಥೆ ನಿರ್ಮಿಸಿರುವ ೨೯೮ ಕಿಲೋಮೀಟರ್ ಉದ್ದದ ನಿಮ್ಮು-ಪದುಮ್-ದಾರ್ಚಾ ರಸ್ತೆಯನ್ನು ಅವರು ರಾಷ್ಟ್ರಕ್ಕೆ ಸಮರ್ಪಿಸಲಿದ್ದಾರೆ. ಇದೇ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ೯ ಮೆಗಾವ್ಯಾಟ್ ಸಾಮರ್ಥ್ಯದ ಹನು ಸಣ್ಣ ಜಲವಿದ್ಯುತ್ ಯೋಜನೆ ಮತ್ತು ೬೬ ಕೆವಿ ಡಬಲ್-ಸರ್ಕ್ಯೂಟ್ ದಾಹ್-ಹನು-ಖಾಲ್ತ್ಸಿ ಪ್ರಸರಣ ಮಾರ್ಗವನ್ನು ಉದ್ಘಾಟಿಸಲಿದ್ದಾರೆ.

<><><><>

ದೇಶದ ನಾಗರಿಕತೆಯ ಪಯಣವು ಶತಮಾನಗಳ ಸಾಂಸ್ಕೃತಿಕ ವಿನಿಮಯ ಮತ್ತು ಜ್ಞಾನ ಹಂಚಿಕೆಯಿಂದ ರೂಪುಗೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯ ವಿಜ್ಞಾನ ಭವನದಲ್ಲಿಂದು ಜಾಗತಿಕ ಮಟ್ಟದಲ್ಲಿ ಭಾರತದ ಸಾಂಸ್ಕೃತಿಕ ಸಂಪರ್ಕಗಳ ಕುರಿತಾದ ಅಂತಾರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಅಧಿವೇಶನ ಉದ್ದೇಶಿಸಿ ಮಾತನಾಡಿದ ಅವರು, ನಳಂದಾದಂತಹ ಕಲಿಕಾ ಕೇಂದ್ರಗಳು ಭಾರತ ಮತ್ತು ಏಷ್ಯಾದ ಇತರ ಭಾಗಗಳ ನಡುವಿನ ಜ್ಞಾನ ವಿನಿಮಯವನ್ನು ಬಲಪಡಿಸಿವೆ ಎಂದರು. ಬೌದ್ಧ ಭಿಕ್ಷುಗಳು, ವಿದ್ವಾಂಸರು, ವ್ಯಾಪಾರಿಗಳು ಮತ್ತು ಪ್ರವಾಸಿಗರು, ಭೂ ಹಾಗೂ ಸಮುದ್ರ ಮಾರ್ಗಗಳ ಮೂಲಕ ಭಾರತೀಯ ಆಲೋಚನೆಗಳನ್ನು ಪ್ರಪಂಚದಾದ್ಯಂತ ಕೊಂಡೊಯ್ದರು ಎಂದು ಅವರು ಹೇಳಿದರು. ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಮಾತನಾಡಿ, ನಾಗರಿಕತೆಯ ಪ್ರಭಾವವನ್ನು ಕೇವಲ ಅದರ ಭೌಗೋಳಿಕ ಗಡಿಗಳ ಮೂಲಕ ಅಳೆಯಲು ಸಾಧ್ಯವಿಲ್ಲ. ಆಲೋಚನೆಗಳು, ಜ್ಞಾನ ಮತ್ತು ಕಲೆಯ ವಿನಿಮಯವು ನಾಗರಿಕತೆಗಳು ಭೌಗೋಳಿಕ ಗಡಿಗಳನ್ನು ಮೀರಿ ಬೆಳೆಯಲು ಸಹಾಯ ಮಾಡಿವೆ ಎಂದು ತಿಳಿಸಿದರು. ಈ ಸಮ್ಮೇಳನವು ಕೇವಲ ಇತಿಹಾಸವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಲ್ಲ, ಬದಲಾಗಿ ಹಿಂದಿನ ಕಾಲದ ಜ್ಞಾನವು ಭವಿಷ್ಯವನ್ನು ಹೇಗೆ ರೂಪಿಸಬಲ್ಲದು ಎಂಬುದನ್ನು ಅನ್ವೇಷಿಸುವ ಅವಕಾಶವೂ ಆಗಿದೆ ಎಂದು ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಹೇಳಿದರು.

<><><><>

ವಿದೇಶಾಂಗ ಸಚಿವ ಡಾ. ಎಸ್.ಜೈಶಂಕರ್ ಮತ್ತು ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್ ನವದೆಹಲಿಯಲ್ಲಿ ಇಂದು ವ್ಯಾಪಾರ ಮತ್ತು ಹೂಡಿಕೆ, ಶಿಕ್ಷಣ, ಇಂಧನ, ರಕ್ಷಣೆ ಮತ್ತು ಜನರಿಂದ ಜನರಿಗೆ ವಿನಿಮಯದ ಮೂಲಕ ಭಾರತ-ಕೆನಡಾ ಸಂಬಂಧಗಳಲ್ಲಿನ ಪ್ರಗತಿಯನ್ನು ಪರಿಶೀಲಿಸಿದರು.

ಉಭಯ ನಾಯಕರು ಪ್ರಮುಖ ಪ್ರಾದೇಶಿಕ ಮತ್ತು ಜಾಗತಿಕ ಬೆಳವಣಿಗೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಕೆನಡಾ ವಿದೇಶಾಂಗ ಸಚಿವೆ ಅನಿತಾ ಆನಂದ್, ಅಂತಾರಾಷ್ಟ್ರೀಯ ಕ್ರಮವು ಆಳವಾದ ಬದಲಾವಣೆಗೆ ಒಳಗಾಗುತ್ತಿರುವ ಸಮಯದಲ್ಲಿ, ಕೆನಡಾ ಮತ್ತು ಭಾರತದ ನಡುವಿನ ನಿಕಟ ಸಂಬಂಧವು ಭವಿಷ್ಯದ ಸಮೃದ್ಧಿಯನ್ನು ರೂಪಿಸಲು ಹಾಗೂ ಮುಕ್ತ ಮತ್ತು ಸಮೃದ್ಧ ಇಂಡೋ-ಪೆಸಿಫಿಕ್‌ಗೆ ಕೊಡುಗೆ ನೀಡಲು ಅವಕಾಶ ನೀಡುತ್ತದೆ ಎಂದು ಹೇಳಿದ್ದಾರೆ.

<><><><>

'ಜನ ಸೇವೆಯಿಂದ ದೇಶ ಸೇವೆ' ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ 'ವಿಕಸಿತ ಭಾರತ' ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ 'ಪ್ರಧಾನಮಂತ್ರಿ ಉಜ್ವಲ ಯೋಜನೆ' ಕುರಿತ ಒಂದು ವರದಿ ಇಲ್ಲಿದೆ. ಬಡ ಕುಟುಂಬಗಳ ಮಹಿಳೆಯರಿಗೆ ಉತ್ತಮ ಆರೋಗ್ಯ ಹಾಗೂ ಸಮಾನ ಅವಕಾಶ ಕಲ್ಪಿಸುವ ಉದ್ದೇಶದಿಂದ ೨೦೧೬ರಲ್ಲಿ ಆರಂಭವಾದ 'ಪ್ರಧಾನಮಂತ್ರಿ ಉಜ್ವಲ ಯೋಜನೆ'ಯು ದೇಶಾದ್ಯಂತ ದೊಡ್ಡ ಪರಿವರ್ತನೆ ತಂದಿದೆ. ಮನೆಯ ಮಹಿಳೆಯ ಹೆಸರಿನಲ್ಲಿಯೇ ಎಲ್‌ಪಿಜಿ ಸಂಪರ್ಕ ನೀಡುವುದರ ಮೂಲಕ ಕೋಟ್ಯಂತರ ಕುಟುಂಬಗಳನ್ನು ಕಟ್ಟಿಗೆ ಒಲೆಯ ಹೊಗೆಯಿಂದ ಮುಕ್ತಗೊಳಿಸಿದೆ. ೨೦೨೬ರ ಮೇ ತಿಂಗಳ ವೇಳೆಗೆ ದೇಶದ ಬಡ ಮಹಿಳೆಯರಿಗೆ ೧೦.೫ ಕೋಟಿಗೂ ಅಧಿಕ ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ವಿತರಿಸಲಾಗಿದೆ. ಈ ಯೋಜನೆಯಿಂದ ರಾಷ್ಟ್ರೀಯ ಮಟ್ಟದಲ್ಲಿ ಒಟ್ಟಾರೆ ಎಲ್‌ಪಿಜಿ ಸಂಪರ್ಕಗಳ ಸಂಖ್ಯೆ ೨೦೧೪ರಲ್ಲಿದ್ದ ೧೪.೫೧ ಕೋಟಿಯಿಂದ ೨೦೨೬ರಲ್ಲಿ ೩೩.೩೯ ಕೋಟಿಗೆ ಏರಿಕೆಯಾಗಿದ್ದು, ಬಳಕೆಯೂ ದುಪ್ಪಟ್ಟಾಗಿದೆ. ಅನಿಲ ಮರುಪೂರಣ ಪ್ರಮಾಣ, ೨೦೨೧-೨೨ರಲ್ಲಿ ಪ್ರತಿ ಫಲಾನುಭವಿಗೆ ಸರಾಸರಿ ೩ ಇದ್ದದ್ದು ೨೦೨೫-೨೬ರ ವೇಳೆಗೆ ಸುಮಾರು ೫ಕ್ಕೆ ಏರಿದೆ.

<><><><>

ಹೈದರಾಬಾದ್‌ನಲ್ಲಿ ಇಂದು ನಡೆಯುತ್ತಿರುವ ನಾಲ್ಕನೇ ಟಿ-೨೦ ಅಂತಾರಾಷ್ಟ್ರೀಯ ಪಂದ್ಯದಲ್ಲಿ ಭಾರತ ಮತ್ತು ವೆಸ್ಟ್ ಇಂಡೀಸ್ ತಂಡಗಳು ಮುಖಾಮುಖಿಯಾಗಿವೆ. ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡುತ್ತಿರುವ ವೆಸ್ಟ್ ಇಂಡೀಸ್, ಇತ್ತೀಚಿನ ವರದಿ ಬಂದಾಗ, ೭.೩ ಓವರ್‌ಗಳಲ್ಲಿ ೧ ವಿಕೆಟ್ ನಷ್ಟಕ್ಕೆ ೯೮ ರನ್ ಮಾಡಿ ಆಡುತ್ತಿದೆ. ಐದು ಪಂದ್ಯಗಳ ಸರಣಿಯಲ್ಲಿ ಭಾರತ ಪ್ರಸ್ತುತ ೨-೧ ಅಂತರದ ಮುನ್ನಡೆಯಲ್ಲಿದೆ.

<><><>

ಪರಾಗ್ವೆಯಲ್ಲಿ ನಡೆದ ವಿಶ್ವ ಸ್ಕೇಟಿಂಗ್ ಗೇಮ್ಸ್‌ನ ಪುರುಷರ ೧೦೦೦ ಮೀಟರ್ ಸ್ಪ್ರಿಂಟ್ ವಿಭಾಗದಲ್ಲಿ ಭಾರತದ ಆನಂದ ಕುಮಾರ್ ವೇಲ್‌ಕುಮಾರ್ ಬೆಳ್ಳಿ ಪದಕ ಗೆದ್ದಿದ್ದಾರೆ. ಅವರು ಅತ್ಯಲ್ಪ ಅಂತರದಿಂದ ಚಿನ್ನದ ಪದಕವನ್ನು ಗೆಲ್ಲುವ ಅವಕಾಶವನ್ನು ಕಳೆದುಕೊಂಡು, ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಪುರುಷರ ೧೦೦೦ ಮೀಟರ್ ಸ್ಪ್ರಿಂಟ್ ಸ್ಪರ್ಧೆಯಲ್ಲಿ ೧ ನಿಮಿಷ ೨೧.೯೨೨ ಸೆಕೆಂಡುಗಳ ಸಮಯವನ್ನು ದಾಖಲಿಸುವ ಮೂಲಕ ಅವರು ಅತ್ಯುತ್ತಮ ಪ್ರದರ್ಶನ ನೀಡಿದರು. ಚಿನ್ನದ ಪದಕ ವಿಜೇತರು ಮತ್ತು ಆನಂದಕುಮಾರ್ ನಡುವಿನ ಸಮಯದ ಅಂತರ ಕೇವಲ ೪ ಮಿಲಿಸೆಕೆಂಡುಗಳಷ್ಟಿತ್ತು. ಆನಂದಕುಮಾರ್ ಇಲ್ಲಿಯವರೆಗೆ ಎರಡು ಪದಕಗಳನ್ನು ಗೆದ್ದಿದ್ದು, ಭಾನುವಾರ ನಡೆಯಲಿರುವ ಮ್ಯಾರಥಾನ್ ಸ್ಪರ್ಧೆಯಲ್ಲಿ ಭಾಗವಹಿಸುವುದರಿಂದ ಮತ್ತೊಂದು ಪದಕ ಗೆಲ್ಲುವ ಅವಕಾಶ ಹೊಂದಿದ್ದಾರೆ. ಅವರು ೫೦೦ ಮೀಟರ್ ಸ್ಪ್ರಿಂಟ್ ವಿಭಾಗದಲ್ಲಿ ಈಗಾಗಲೇ ಕಂಚಿನ ಪದಕ ಗೆದ್ದಿದ್ದಾರೆ.

<><><>

ಆಂಧ್ರಪ್ರದೇಶದ ವಿಜಯವಾಡದಲ್ಲಿ ನಡೆದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಯ ಕರ್ನಾಟಕ ಮತ್ತು ಆಂಧ್ರಪ್ರದೇಶ ತಂಡಗಳ ನಡುವಿನ ಎಲೈಟ್ ಬಿ ಗುಂಪಿನ ಪಂದ್ಯ ಡ್ರಾ ನಲ್ಲಿ ಅಂತ್ಯಗೊಂಡಿದೆ. ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ ೨೭೪ ಹಾಗೂ ೨ನೇ ಇನ್ನಿಂಗ್ಸ್ ನಲ್ಲಿ ೩೩೭ ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಮೊದಲ ಇನ್ನಿಂಗ್ಸ್‌ನಲ್ಲಿ ೪೧೮ ರನ್ ಗಳಿಸಿದ ಆಂಧ್ರ ಪ್ರದೇಶ, ೨ನೇ ಇನ್ನಿಂಗ್ಸ್‌ನಲ್ಲಿ ಐದನೇ ದಿನದಾಂತ್ಯಕ್ಕೆ ೪ ವಿಕೆಟ್ ನಷ್ಟಕ್ಕೆ ೧೦೪ ರನ್ ಗಳಿಸಿತು. ಪ್ರಥಮ ಇನ್ನಿಂಗ್ಸ್ ಮುನ್ನಡೆ ಆಧಾರದಲ್ಲಿ ಆಂಧ್ರ ಪ್ರದೇಶ ಮೂರು ಅಂಕ ಪಡೆದರೆ, ಕರ್ನಾಟಕ ಒಂದು ಅಂಕ ಪಡೆದಿದೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆ ನವದೆಹಲಿಯಲ್ಲಿ ಏಷ್ಯನ್ ಗೇಮ್ಸ್ ೨೦೨೬ರಲ್ಲಿ ಭಾಗವಹಿಸಿದ ಭಾರತೀಯ ಕ್ರೀಡಾಪಟುಗಳ ತಂಡದೊಂದಿಗೆ ಸಂವಾದ ನಡೆಸಲಿದ್ದಾರೆ. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಯವರು ಸಭೆ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಜಪಾನ್‌ನ ಐಚಿ-ನಗೋಯಾದಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ೨೧ ಚಿನ್ನ, ೨೮ ಬೆಳ್ಳಿ ಮತ್ತು ೩೮ ಕಂಚಿನ ಪದಕಗಳೊಂದಿಗೆ ಒಟ್ಟು ೮೭ ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಪಡೆಯಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>